# ಕ್ರೈಸ್ತ ಐಕ್ಯತೆಯ ಪ್ರಾರ್ಥನಾ ವಿಧಿ -2021

ಕನ್ನಡ ಅನುವಾದ

ಸೇವಾದರ್ಶಿ ವಿನಯ್ ಕುಮಾರ್

ಚಿಕ್ಕಮಗಳೂರು ಧರ್ಮಕ್ಷೇತ್ರ,

ಪ್ರಾಂತೀಯ ನಿರ್ದೇಶಕರು

ವಂ.ಸ್ವಾಮಿ.ಜಾರ್ಜ್ ಲೋಬೋ.

# ಕ್ರೈಸ್ತಐಕ್ಯತೆಯ ಪ್ರವಾಹ–2021

**“ ನನ್ನ ಪ್ರೀತಿಯಲ್ಲಿ ನೆಲೆಗೊಳ್ಳಿರಿ ಹಾಗೂ ನೀವು ಸಮೃದ್ಧಿಯಾಗಿ ಫಲಕೊಡುವಿರಿ”**

**(ಯೊವಾನ್ನ 15:5–9) –> ಬೈಬಲ್ ಶ್ರೀ ಗ್ರಂಥದ ವಾಚನ**

**ಐಕ್ಯತೆಯಆಚರಣೆ**

**ಸೂಚನೆಗಳು**

- ಈ ಆಚರಣೆಯ ಪ್ರಾರ್ಥನಾ ವಿಧಿಯನ್ನುಗ್ರ್ಯಾಂಡ್‌ಚಾಪ್‌ಧರ್ಮಭಗಿನಿಯರು ಸಿಧ್ಧಪಡಿಸಿರುತ್ತಾರೆ. ಈ ಗ್ರ್ಯಾಂಡ್‌ಚಾಪ್‌ಧರ್ಮಭಗಿನಿಯರುತಮ್ಮಪ್ರಾರ್ಥನಾ ಸಂಪ್ರದಾಯಕ್ಕೆಅನುಗುಣವಾಗಿ ಮಾರು ಹಂತದಲ್ಲಿ ಪ್ರಾರ್ಥನೆಗಳನ್ನು ಸಿಧ್ಧಪಡಿಸಿದ್ದಾರೆ. ಇದನ್ನುಜಾಗರಣೆ (ವಿಜಿಲ್) ಅನ್ನಬಹುದಾಗಿದೆ. ಅದೇರೀತಿಒಂದು ವಾರದ ನಮ್ಮಕ್ರೈಸ್ತಐಕ್ಯತೆಯಪ್ರಾರ್ಥನಾವಿಧಿಯಲ್ಲಿ ಈ ಮೂರುಜಾಗರಣೆ ಮಾದರಿಯ ಪ್ರಾರ್ಥನೆಯನ್ನು ನೀಡಲಾಗಿದೆ.
- ಪ್ರತಿಯೊಂದುಜಾಗರಣೆ ಪ್ರಾರ್ಥನೆಯುಒಂದೇರೀತಿಯ ಮಾದರಿಯನ್ನುಅನುಸರಿಸುತ್ತದೆ.
  ಅ) ಬೈಬಲ್ ನಿಂದ ವಾಚನಗಳು
  ಆ) ಒಂದುಕೀರ್ತನೆ
  ಇ)ತುಸುಕಾಲ ಮೌನ  ಹಾಗ
  ಈ) ಭಿನ್ನಹಗಳನ್ನುಒಳಗೊಂಡಿದ

- ಪ್ರತಿಯೊಂದುಜಾಗರಣೆ ಪ್ರಾರ್ಥನೆಯುಒಂದು ವಿಷಯದ ಮೇಲೆ ಅನುಗುಣವಾಗಿರಚಿಸಲ್ಪಟ್ಟುಅದಕ್ಕೆ ಸೂಕ್ತವಾದಒಂದುಕಾರ್ಯಯೋಜನೆಯನ್ನುಹಾಕಿಕೊಳ್ಳಬೇಕಾಗಿದೆ.
- ಮೊದಲನೆ ಜಾಗರಣೆಯುಇದೇ ಮನುಷ್ಯನ ಸಮಗ್ರಐಕ್ಯತೆಗಾಗಿಕೇಂದ್ರಿತವಾಗಿದೆ. ಆಚರಣೆಯಉದ್ದಕ್ಕೂ ಮೌನಕ್ಕೆ ಹೆಚ್ಚು ಗಮನವಹಿಸಬೇಕಾಗುತ್ತದೆ.
- ಎರಡನೆಜಾಗರಣೆಯುಕ್ರೈಸ್ತರ ನಡುವೆಒಗ್ಗಟ್ಟನ್ನುಕಾಣುವಂತೆ ಆಶಿಸುವುದನ್ನು ವ್ಯಕ್ತಪಡಿಸುತ್ತದೆ.
- ಮೂರನೆಜಾಗರಣೆಯುಎಲ್ಲಾಜನರ ಹಾಗೂ ಸೃಷ್ಟಿ ಸಂಕುಲದೊಂದಿಗೆಐಕ್ಯತೆಯನ್ನು ಬಿಂಬಿಸುತ್ತದೆ.

ಈ ರೀತಿಯಾಗಿ ಬೇರೆ ಬೇರೆ ವಿಧದಲ್ಲಿ ಈ ಪ್ರಾರ್ಥನೆಯ ವಿಷಯಗಳನ್ನು ಧ್ಯಾನಿಸಬಹುದಾಗಿದೆ.ಆದರೆ ನಮ್ಮ ನಾಡು, ನುಡಿ ಹಾಗೂ ಸಂಸ್ಕೃತಿಯನ್ನು ಮನಸಲ್ಲಿಟ್ಟುಕೊಂಡು ಈ ಆಚರಣೆಯನ್ನು ನಾವು ನಮ್ಮ ಅನುಕೂಲಕ್ಕೆ ಬದಲಿಸಿಕೊಳ್ಳ ಬೇಕಾಗಿದೆ.

<u>ಮಾರ್ಗಸೂಚನೆಗಳು:</u>

- ಈ ಪ್ರಾರ್ಥನಾ ವಿಧಿಗೆ ಬರುವ ಪ್ರತಿಯೊಬ್ಬರಕೈಯಲ್ಲಿ ಮೇಣದ ಬತ್ತಿಅಥವಾ ದೀಪವಿರಬೇಕು
- ಪ್ರಾರ್ಥನಾ ಸಂಯೋಜಕರು ಸ್ಥಳವನ್ನು ಗಮನದಲ್ಲಿಟ್ಟುಕೊಂಡುಎಲ್ಲರನ್ನುವೃತ್ತಕಾರದಲ್ಲಿ ನಿಲ್ಲುವಂತೆ ಸೂಚಿಸಬೇಕು.

- ಪ್ರಾರ್ಥನಾಜಾಗದ ಮಧ್ಯೆ ಭಾಗದಲ್ಲಿಒಂದುದೊಡ್ಡ ದೀಪ ಸ್ತಂಭವನ್ನುಅಥವಾಒಂದುದೊಡ್ಡ ಮೇಣದ ಬತ್ತಿಯನ್ನುಇಡಬೇಕು.
- 6 ಅಥವಾ 8 ಸದಸ್ಯರು (ಬೇರೆ ಬೇರೆ ಪಂಗಡಕ್ಕೆ ಸೇರಿದವರು) ಮೇಣದ ಬತ್ತಿಯ ಸುತ್ತ ವೃತ್ತಕಾರದಲ್ಲಿ ನಿಲ್ಲಬೇಕು.

  –>(ಬತ್ತಿಯೊಂದಿಗೆ)

- ಪ್ರಾರ್ಥನೆ ನಡೆಸಿಕೊಡುವವರು ದೊಡ್ಡ ಬತ್ತಿಯಿಂದ ಈ ಆಯ್ದ ಸದಸ್ಯರಿಗೆ ಬೆಳಕನ್ನು ಹತ್ತಿಸುವುದು. ಈ ಸಮಯದಲ್ಲಿ

  "ನಾನೇ ಮಾರ್ಗ"ಗೀತೆಯನ್ನು ಹಾಡುವುದು.

- ಆಯ್ದ ಸದಸ್ಯರು ನಂತರಅಲ್ಲಿ ನೆರೆದಿರುವ ಪ್ರತಿಯೊಬ್ಬರಿಗೆ ಬೆಳಕನ್ನು ಹೊತ್ತಿಸುವುದು.
- ಪ್ರಾರ್ಥನಾ ವಿಧಿಯು ಮುಗಿಯುವವರೆಗೆಅಥವಾಅದಕ್ಕೆ ಮುಂಚಿತವಾಗಿಯೇ ಬತ್ತಿಗಳನ್ನು ನಂದಿಸಬಹುದು.
- ಹಾಡುಗಳನ್ನು ವಿಷಯಕ್ಕೆ ಸೂಕ್ತವಾದುದನ್ನು ಹಾಡಬಹುದು.
- ಈ ಆಚರಣೆಗೆ ಬೇಕಾದ ಮಾಹಿತಿಯನ್ನುಇಲ್ಲಿ ನೋಡಬಹುದಾಗಿದೆ.

[www.grandchamp.org](http://www.grandchamp.org).

ಕ್ರೈಸ್ತಐಕ್ಯತೆಯ ಪ್ರಾರ್ಥನಾ ವಿಧಿ

(ಯೊವಾನ್ನ 15:5–9)

ಪ್ರಾರ್ಥನೆಗೆಆಹ್ವಾನ

ಪ್ರಾರಂಭಗೀತೆ– ಪವಿತ್ರಾತ್ಮರಗೀತೆಯನ್ನು ಹಾಡುವುದು ಸೂಕ್ತ

ಸ್ವಾಗತದ ನುಡಿಗಳು– ಸರ್ವರಿಗೂ ಸ್ವಾಗತವನ್ನುಕೋರುವುದು.

ಮುಖಂಡ– ನಮ್ಮ ಪ್ರಭುಯೇಸುಕ್ರಿಸ್ತರ ವರಪ್ರಸಾದವುದೇವರ
ಪ್ರೀತಿಯು ಮತ್ತು ಪವಿತ್ರಾತ್ಮರಅನ್ಯೋನ್ಯತೆಯು
ನಿಮ್ಮೊಡನೆಇರಲಿ.
ಜನರು– ನಿಮ್ಮೊಡನೆಯೂಇರಲಿ.

ವಾಚಕ–1 –ಕ್ರಿಸ್ತರಲ್ಲಿ ನಲ್ಮೆಯ ಸಹೋದರ,ಸಹೋದರಿಯರೇ,
ಈ ವರ್ಷಕ್ರೈಸ್ತಐಕ್ಯತೆಯ ಪ್ರಾರ್ಥನೆಗೆಆಯ್ಕೆ
ಮಾಡಿರುವ ವಿಷಯ '
" ನನ್ನ ಪ್ರೀತಿಯಲ್ಲಿ ನೆಲೆಗೊಳ್ಳಿರಿ ಹಾಗೂ ನೀವು ಸಮೃದ್ಧಿಯಾಗಿ
ಫಲಕೊಡುವಿರಿ"(ಯೊವಾನ್ನ 15:5–9)

ವಾಚಕ–2 – ನಾವೆಲ್ಲರೂಒಂದಾಗಿದೇವರಲ್ಲಿಇರಬೇಕು
ಎನ್ನುವುದುದೇವರಅತೀವಆಸೆಯಾಗಿತ್ತುಇದನ್ನು ಪ್ರಭು
ಕ್ರಿಸ್ತರು ವ್ಯಕ್ತಪಡಿಸಿದರು.ನಾವು ಬರೀ ಬೇರೆಯವರಲ್ಲಿ ಭಿನ್ನತೆಯನ್ನು
ಕಂಡು ಬೆರಗಾಗುತ್ತೇವೆ.ಆದರೆಇಂದುಕ್ರಿಸ್ತರುಭಿನ್ನತೆಯನ್ನು
ಮರೆತುಅವರಲ್ಲಿಒಂದಾಗಿ ಫಲಕೊಡಲುಕರೆ ನೀಡುತ್ತಾರೆ.

ವಾಚಕ–3 – ಈ ಪ್ರಾರ್ಥನಾ ವಿಧಿಯಲ್ಲಿಭಾಗಿಯಾಗಿರುವ ನಾವು
ಕ್ರಿಸ್ತರಕರೆಗೆಅನುಗುಣವಾಗಿ ನಡೆಯಬಹುದುಎಂಬುದನ್ನುಚಿಂತಿಸೋಣ.
ನಾವು ದೇವರ ಮುಂದೆ ಶರಣಾಗಿ ನಮ್ಮನ್ನೇಆತನ ಕರಗಳಿಗೆ ಅರ್ಪಿಸಿಕೊಂಡು,
ನಮ್ಮಭಿನ್ನತೆಯನ್ನುಮರೆತುಎಲ್ಲರಲ್ಲಿಒಂದಾಗೋಣ.

ಮುಖಂಡ– ಶಾಂತಿಯಅರಸರಾದ ಪ್ರಭುವಿನಲ್ಲಿ ಪ್ರಾರ್ಥಿಸೋಣ.
ದೇವರೇ , ನೀವು ದ್ರಾಕ್ಷಾತೋಟಗಾರ ನಮ್ಮನ್ನು
ಪ್ರತಿಯೊಂದುದ್ರಾಕ್ಷ ಬಳ್ಳಿಗಳನ್ನು ನೋಡಿಕೊಳ್ಳುವಂತೆ
ಪೋಷಿಸುತ್ತೀರಿ. ಪ್ರತಿಯೊಂದು ಬಳ್ಳಿಯು ವಿಭಿನ್ನವಾಗಿದ್ದರೂಅದು
ಸೌಂದರ್ಯವನ್ನು ಹೊಂದಿರುವಂತೆ ನಾವು ನಮ್ಮ ಭಿನ್ನತೆಗಳನ್ನು ಮರೆತು
ನಮ್ಮಲ್ಲಿರುವ ಒಳ್ಳೆಯತನವನ್ನು ನೋಡಿ ಆನಂದಿಸುವಂತೆ ಮಾಡಿರಿ.
ಬೇರೆಯಾಗುವ ಹಾಗೂ ವಿಭಜಿಸುವ ಮನಸ್ಸು ನಮ್ಮಲ್ಲಿದ್ದುಅದು ವಿಶ್ವಾಸದಿಂದ
ದೂರ ಸರಿಯುವಂತೆ ಮಾಡಿದೆ. ನಮ್ಮಲ್ಲಿರುವ ವೈರತ್ವವನ್ನು ತೊಲಗಿಸಿರಿ. ನಮ್ಮ
ಹೃದಯಗಳು ನಿಮ್ಮಲ್ಲಿಗೆತೆರೆಯುವಂತೆ ಮಾಡಿರಿ. ನಿಮ್ಮಕ್ಷಮೆಯನ್ನು ನಮಗೆ
ಕರುಣಿಸಿರಿ.ಅದರಿಂದ ನಾವು ಒಂದಾಗಿ ನಿಮ್ಮ ನಾಮಕ್ಕೆ ಮಹಿಮೆಯನ್ನು
ಸಲ್ಲಿಸುವಂತೆ ಮಾಡಿರಿ.

ಜನರು– ಆಮೆನ್

<u>ಸ್ತುತಿಮಾಲೆ</u>

ಜನರು–> ಮಹಿಮೆ ಸಲ್ಲಲಿ ದೇವಾ ನಿಮಗೆ, ನಮ್ಮನ್ನು ನೀವು ಎಲ್ಲರ ಮಧ್ಯೆ
ಯಿಂದಕರೆದಿದ್ದೀರಿ.
ವಾಚಕ– 1 ಇಡೀ ವಿಶ್ವ ಹಾಗೂ ಜನರ ಮಧ್ಯೆಯಿಂದ ಸ್ತುತಿಸುತ್ತೇವೆ.
ಜನರು–> ಮಹಿಮೆ ಸಲ್ಲಲಿ ದೇವಾ ನಿಮಗೆ, ನಮ್ಮನ್ನು ನೀವು ಎಲ್ಲರ ಮಧ್ಯೆ
ಯಿಂದಕರೆದಿದ್ದೀರಿ.
ವಾಚಕ– 2 –>ಇಡೀ ಸೃಷ್ಟಿ ಸಂಕುಲ ಹಾಗೂ ಜೀವರಾಶಿಗಳಮಧ್ಯೆಯಿಂದ
ಸ್ತುತಿಸುತ್ತೇವೆ.
ಜನರು–> ಮಹಿಮೆ ಸಲ್ಲಲಿ ದೇವಾ ನಿಮಗೆ, ನಮ್ಮನ್ನು ನೀವು ಎಲ್ಲರ ಮಧ್ಯೆ
ಯಿಂದಕರೆದಿದ್ದೀರಿ.
ವಾಚಕ–3 –> ನಮ್ಮದುಃಖ ಹಾಗೂ ನೋವಿನ ಮಧ್ಯೆಯಿಂದ ಸ್ತುತಿಸುತ್ತೇವೆ.
ಜನರು–> ಮಹಿಮೆ ಸಲ್ಲಲಿ ದೇವಾ ನಿಮಗೆ, ನಮ್ಮನ್ನು ನೀವು ಎಲ್ಲರ ಮಧ್ಯೆ
ಯಿಂದಕರೆದಿದ್ದೀರಿ.
ವಾಚಕ– 1–> ನಮ್ಮಯಶಸ್ಸು ಹಾಗೂ ಸಾಧನೆಗಳ ಮಧ್ಯೆಯಿಂದ ಸ್ತುತಿಸುತ್ತೇವೆ
ಜನರು–> ಮಹಿಮೆ ಸಲ್ಲಲಿ ದೇವಾ ನಿಮಗೆ, ನಮ್ಮನ್ನು ನೀವು ಎಲ್ಲರ ಮಧ್ಯೆ
ಯಿಂದಕರೆದಿದ್ದೀರಿ.
ವಾಚಕ–2–> ನಮ್ಮ ಸಮಸ್ಯೆ ಹಾಗೂ ಕಲಹಗಳ ಮಧ್ಯೆಯಿಂದ ಸ್ತುತಿಸುತ್ತೇವೆ.

**ಜನರು–> ಮಹಿಮೆ ಸಲ್ಲಲಿ ದೇವಾ ನಿಮಗೆ, ನಮ್ಮನ್ನು ನೀವು ಎಲ್ಲರ ಮಧ್ಯೆ ಯಿಂದಕರೆದಿದ್ದೀರಿ.**

**ವಾಚಕ–3–> ನಮ್ಮ ಪ್ರತಿಭಟನೆ ಹಾಗೂ ಸಂಧಾನಗಳ ಮಧ್ಯೆಯಿಂದ ಸ್ತುತಿಸುತ್ತೇವೆ.**

**ಜನರು–> ಮಹಿಮೆ ಸಲ್ಲಲಿ ದೇವಾ ನಿಮಗೆ, ನಮ್ಮನ್ನು ನೀವು ಎಲ್ಲರ ಮಧ್ಯೆ ಯಿಂದಕರೆದಿದ್ದೀರಿ.**

**ವಾಚಕ–1–> ವಿಭಜನೆ ಹಾಗೂ ಸಂದಿಗ್ಧ ಪರಿಸ್ಥಿತಿಯ  ಮಧ್ಯೆಯಿಂದ ಸ್ತುತಿಸುತ್ತೇವೆ.**

**ಜನರು–> ಮಹಿಮೆ ಸಲ್ಲಲಿ ದೇವಾ ನಿಮಗೆ, ನಮ್ಮನ್ನು ನೀವು ಎಲ್ಲರ ಮಧ್ಯೆ ಯಿಂದಕರೆದಿದ್ದೀರಿ.**

**ಹಾಡು**

**ಮೊದಲನೆ ಜಾಗರಣೆ ಕ್ರಿಸ್ತರಲ್ಲಿ ಒಂದಾಗಿ– ಇಡಿ ಮಾನವ ಕುಲದ ಜೊತೆ ಒಂದಾಗಿ.**

**ಕೀರ್ತನೆ –103   ವಾಚನ ಯೊವಾನ್ನ 15:11–12 ಹಾಡು. ಮೌನ**

**ಬಿನ್ನಹಗಳು**

**ವಾಚಕ– 1** ಪ್ರೀತಿಮಯದೇವರೆ, ಕ್ರಿಸ್ತರಲ್ಲಿನೀವುನಮಗೆತಿಳಿಸಿದ್ದೀರಿ.

" ನೀವುನನ್ನನ್ನುಆರಿಸಿಕೊಳ್ಳಲಿಲ್ಲಬದಲಾಗಿನಾನುನಿಮ್ಮನ್ನುಆರಿಸಿಕೊಂಡಿದ್ದೇನೆ."  ಎಂದು.

ನಿಮ್ಮಸ್ನೇಹವನ್ನುನಮಗೆನೀಡಲುನೀವುನಮ್ಮನ್ನುಹುಡುಕುತ್ತೀರಿಹಾಗೂಆಹ್ವಾನವನ್ನುನೀಡುತ್ತೀರಿ.

ನಿಮ್ಮಕರೆಗೆಸ್ಪಂದಿಸಲುಹಾಗೂನಿಮ್ಮೀಆಹ್ವಾನವನ್ನುಸ್ವೀಕರಿಸಲುನಮಗೆಕಲಿಸಿರಿಹಾಗೂನಿಮ್ಮಲ್ಲಿಜೀವಿಸುವವ ರವನ್ನು ಕರುಣಿಸಿರಿ.

.

**ಜನರು–>ನಮ್ಮ  ಹೃದಯದ ಆನಂದ ಪ್ರಭುವಿನಲ್ಲಿದೆ.**

\

**ವಾಚಕ–2**–ಜೀವದದೇವರೇ, ನೀವುನಮ್ಮನ್ನುಜನರಮಧ್ಯೆಯಿಂದ

ಕರೆದುವಿಶೇಷವರಪ್ರಸಾದಗಳನ್ನುನೀಡಿರುತ್ತೀರಿ.

ನಿಮ್ಮಪ್ರೀತಿಯಪ್ರಭೆಯುನಮ್ಮಲ್ಲಿಪ್ರಜ್ವಲಿಸಲಿ.ಅದನ್ನುನಾವುಪಡೆದುಎಲ್ಲರಲ್ಲಿಪಸರಿಸುವಂತಾಗಲಿ.

**ಜನರು**–>ನಮ್ಮ ಹೃದಯದ ಆನಂದ ಪ್ರಭುವಿನಲ್ಲಿದೆ.

**ವಾಚಕ– 3** ಒಗ್ಗೂಡಿಸುವದೇವರೇ,

ನೀವುನಮ್ಮನ್ನುದ್ರಾಕ್ಷಾಬಳ್ಳಿಯಂತೆಪ್ರಭುಕ್ರಿಸ್ತರಲ್ಲಿಒಂದಾಗಿಸಿದ್ದೀರಿ.ನಿಮ್ಮ ಪ್ರೀತಿಯ ಸ್ಫೂರ್ತಿ ನಮ್ಮ ಧರ್ಮಕೇಂದ್ರದ ಸಭೆಗಳಲ್ಲಿ ಹಾಗೂ ಪ್ರಾರ್ಥನಾ ಕೂಟಗಳಲ್ಲಿ ನೆಲಸಲಿ .ನಾವೆಲ್ಲರೂ ಒಂದಾಗಿ ಆನಂದವನ್ನು ಸವಿಯುವಂತಾಗಲಿ.

ಕಾರ್ಯ – ಮೌನದ ಕ್ಷಣಗಳು.

ಮುಖಂಡ – ಪ್ರಿಯರೇ ಸಾಮಾನ್ಯವಾಗಿ ನಾವು ಪ್ರಾರ್ಥನೆಯನ್ನು ನಮ್ಮದೈನ್ಯಂದಿನ ಚಟುವಟಿಕೆಗಳಲ್ಲಿ ಒಂದು ಎಂದು ಭಾವಿಸುತ್ತೇವೆ.ಈ ಸ್ವಲ್ಪ ಸಮಯದಲ್ಲಿ ಮೌನವಾಗಿದ್ದು ದೇವರ ಪ್ರಸನ್ನತೆಯನ್ನು ಅನುಭವಿಸಲಿಮೌನದ ಕ್ಷಣಗಳಲ್ಲಿ ದೇವರು ನಮ್ಮೊಡನೆ ಮಾತನಾಡಲಿ

ಮೌನ – ಹಾಡು

ಎರಡನೆಯ ಜಾಗರಣೆ –ಕ್ರೈಸ್ತರ ಐಕ್ಯತೆಗಾಗಿ – ಕೀರ್ತನೆ–85

ವಾಚನ ಕೊರಿಂಥ 1:10–12

ಶ್ಲೋಕ–>ನಮ್ಮದು ಒಂದೇ ವಿಶ್ವಾಸವಾಗಿದೆ .

ಮೌನ –>5 ನಿಮಿಷ

ಹಾಡು

ಬಿನ್ನಹಗಳು

ವಾಚಕ (1) –>ಪವಿತ್ರಾತ್ಮರೇ , ನೀವು ನಮ್ಮ ಧರ್ಮಸಭೆಯನ್ನು ರಚಿಸುತ್ತೀರಿ. ಹಾಗೂ ಮರು ರಚಿಸುತ್ತೀರಿ. ಪ್ರಭು ಯೇಸು ಯಾತನೆಯನ್ನ ಅನುಭವಿಸುವ ಹಿಂದಿನ ದಿನ ಹೇಳಿದಂತೆ " ಎಲ್ಲರೂ ಒಂದಾಗಲಿ" ಎನ್ನುವ ವಾಕ್ಯಗಳನ್ನು ನಮ್ಮ ಹೃದಯಗಳಲ್ಲಿ ಪಿಸುಗುಟ್ಟಿರಿ

ಜನರು – ಪ್ರಭುದಯೆ ತೋರಿ

ವಾಚಕ (2) – ಪ್ರಭು ಯೇಸುವೇ ನೀವು ಶಾಂತಿಯ ರಾಜರಾಗಿದ್ದೀರಿ. ನಿಮ್ಮ ಪ್ರೀತಿಯ ಬೆಂಕಿಯು ನಮ್ಮಲ್ಲಿ ಹಚ್ಚಿರಿ.ಇದರಿಂದ ನಮ್ಮಲ್ಲಿರುವ ಅನುಮಾನ, ಆತಂಕ ಹಾಗೂ ತಪ್ಪು ತಿಳುವಳಿಕೆ ದೂರವಾಗಲಿ

ಜನರು – ಪ್ರಭುದಯೆ ತೋರಿ

ವಾಚಕ (3)–>ಪವಿತ್ರಾತ್ಮರೇ, ಎಲ್ಲರಿಗೆ ಸಾಂತ್ವನವನ್ನು ನೀಡುವವರೇ, ಕ್ಷಮೆಗೆ ಹಾಗೂ ಸಂಧಾನಕ್ಕೆ ನಮ್ಮ ಹೃದಯವನ್ನು ತೆರೆಯುವಂತೆ ಮಾಡಿರಿ.

ಜನರು – ಪ್ರಭುದಯೆ ತೋರಿ

ಕಾರ್ಯಚಟುವಟಿಕೆ–>ಪರಸ್ಪರ ಶಾಂತಿಯನ್ನು ಕೋರುವುದು

ಮೂರನೆಯ ಜಾಗರಣೆ – ಸೃಷ್ಟಿ ಸಮಸ್ತದೊಂದಿಗೆ ಐಕ್ಯತೆಗಾಗಿ

ಕೀರ್ತನೆ :85 ವಾಚನ ಪ್ರಕಟಣೆ 7:9–12 ಹಾಡು

ಪುಟ್ಟ ಪ್ರಬೋಧನೆ

ಮೌನ

ಬಿನ್ನಹಗಳು

ವಾಚಕ (1) –>ಸರ್ವಶಕ್ತ ದೇವರೇ, ನೀವು ಪ್ರತಿಯೊಬ್ಬರನ್ನು ನಿಮ್ಮಹೋಲಿಕೆಯಲ್ಲಿ ಸೃಷ್ಟಿಸಿದ್ದೀರಿ. ನೀವು ನೀಡಿರುವಂತಹ  ಹಲವು ಸಂಪ್ರದಾಯಗಳು ,ವಿಶ್ವಾಸಗಳು , ಸಂಸ್ಕಾರಗಳಿಗಾಗಿ ನಾವು ನಿಮ್ಮನ್ನು ಸ್ತುತಿಸುತ್ತೇವೆ.ಅನ್ಯಾದ ವಿರುದ್ಧ ಅದರಲ್ಲೂ ಭಾಷೆ,
ಬಣ್ಣ ಮತ್ತು ಲಿಂಗ ಬೇಧದ ವಿರುದ್ಧ ಧೈರ್ಯದಿಂದನಿಲ್ಲುವಂತೆ ನಮ್ಮನ್ನು ಪ್ರೇರೇಪಿಸಿರಿ.

ಜನರು –ಶಾಂತಿಯ ದೇವರೇ, ನಿಮ್ಮಲ್ಲಿದೆ ನಮ್ಮ ಭರವಸೆ.

ವಾಚಕ (2) –>ದಯಾಮಯ ದೇವರೆ, ನೀವು ನಮಗೆ ತಿಳಿಸಿದ್ದೀರಿ ಕ್ರಿಸ್ತರಲ್ಲಿ ನಾವು ನಿಮ್ಮಲ್ಲಿ ಒಂದಾಗಿದ್ದೇವೆಂದು ಪ್ರತಿಯೊಬ್ಬ ವ್ಯಕ್ತಿಯೊಡನೆ ಅದರಲ್ಲೂ ಬೇರೆ ಧರ್ಮ ಹಾಗೂ ಪಂಗಡಕ್ಕೆ ಸೇರಿರುವರೊಡನೆ ಸಹನೆಯಿಂದ ವರ್ತಿಸಿ ಗೌರವದಿಂದ ಕಾಣುವ ವರವನ್ನು ನೀಡಿರಿ.

ಜನರು –ಶಾಂತಿಯ ದೇವರೇ, ನಿಮ್ಮಲ್ಲಿದೆ ನಮ್ಮ ಭರವಸೆ.

ವಾಚಕ (3)–>ದಿವ್ಯ ಯೇಸುವೇ ಮಾನವೀಯತೆಯನ್ನು ಕಲಿಸಲು ಈ ಭುವಿಗೆ ನೀವು ಬಂದ್ದೀರಿ.ನಿಮಗೆ ನಮ್ಮ ಎಲ್ಲಾ ಕಷ್ಟ–ದುಃಖಗಳು ತಿಳಿದಿದೆ. ನಿಮ್ಮ ಕರುಣೆಯ ಸ್ಪೂರ್ತಿ ನಮ್ಮಲ್ಲಿರಲಿ. ನಾವು ಪರರ ಕಷ್ಟಕ್ಕೆ ಸ್ಪಂದಿಸುವಂತೆ ಮಾಡಿರಿ.

ಜನರು –ಶಾಂತಿಯ ದೇವರೇ, ನಿಮ್ಮಲ್ಲಿದೆ ನಮ್ಮ ಭರವಸೆ.

ಮೌನ

ಪ್ರಭುವಿನ ಪ್ರಾರ್ಥನೆ–>

ಹಾಡು

(ಮುಖಂಡರು ತಾವು ಹಿಡಿದಿರುವ ಬತ್ತಿಯನ್ನು ಜನರ ಬಳಿಗೆ ಕೊಂಡೊಯ್ಯುತ್ತಾರೆ)

<u>ಮುಖಂಡರು</u>

ಆಧ್ಯಾತ್ಮಿಕತೆಯು ಹಾಗೂ ಐಕ್ಯಮತ್ಯೆಯು ಒಂದೇ ಕೊಂಡಿಯಂತೆ. ಪ್ರಾರ್ಥನೆ ಹಾಗೂ ಕಾರ್ಯ ಜೊತೆಗಿದೆ. ನಾವು ಕ್ರಿಸ್ತರಲ್ಲಿ ಒಂದಾಗಿರುವಂತೆ ನಾವು ಕೂಡ ಒಂದಾಗಿರುವಂತೆ
ನಮ್ಮನ್ನು ಹರಸಿರಿ.ನಿಮ್ಮನ್ನು ಎಂದೆಂದಿಗೂ ನಾವು ಸ್ತುತಿಸುವಂತೆ ಮಾಡಿರಿ.

<u>ಆಶೀರ್ವಚನ</u>

ಭರವಸೆಯ ದೇವರು ನಮ್ಮಲ್ಲಿ ಆನಂದ ಹಾಗೂ ವಿಶ್ವಾಸವನ್ನು ತುಂಬಲಿ. ಪಿತನ ಸುತನ ಮತ್ತು ಪವಿತ್ರಾತ್ಮನ ನಾಮದಲ್ಲಿ ಆಮೆನ್.

ಹಾಡು

ಎಂಟು ದಿನಕ್ಕೆ ಬೈಬಲ್ ಆಧಾರಿತ ಪ್ರಾರ್ಥನೆಗಳು

<u>ಮೊದಲನೆದಿನ</u>

ದೇವರಿಂದ ಕರೆಯಲ್ಪಟ್ಟಿದ್ದೇವೆ.

" ನೀನು ನನ್ನನ್ನು ಆರಿಸಿಕೊಳ್ಳಲಿಲ್ಲ ಬದಲಾಗಿ ನಾನೇ ನಿಮ್ಮನ್ನು ಆರಿಸಿಕೊಂಡಿದ್ದೇನೆ" ( ಯೊವಾನ್ನಾ 15:16)

ಆದಿ 12:1–4 ಅಬ್ರಹಾಮನ ಕರೆ

ಯೊವಾನ್ನಾ 1:35–51 ಪ್ರಥಮ ಪ್ರೇಷಿತರ ಕರೆ

ಧ್ಯಾನ

ಪ್ರಾರ್ಥನೆ : ಪ್ರಭುಕ್ರಿಸ್ತರೇ, ನಿಮ್ಮ ಪವಿತ್ರ ಸ್ನೇಹವನ್ನು ನಮಗೆ ನೀಡುತ್ತೀರಿ. ನಿಮ್ಮ ಪ್ರೀತಿಯ ಕರೆಯನ್ನು ನಾವು ಅರ್ಥೈಸಿಕೊಂಡು ಅದಕ್ಕೆ ಸ್ಪಂದಿಸಿ ತಲೆ ಬಾಗಿ ರೂಪಾಂತರಗೊಂಡು ನಿಮಗೆ ಸಾಕ್ಷಿಗಳಾಗಿ ಬಾಳಲು ನಮ್ಮನ್ನು ಆಶೀರ್ವದಿಸಿರಿ .

## ಎರಡನೆ ದಿನ

### ಆಂತರಿಕ ಪ್ರಭುದ್ಧತೆಗಾಗಿ

"ನೀವು ನನ್ನಲ್ಲಿ ನೆಲೆಗೊಂಡಿರಿ ಆಗ ನಾನು ನಿಮ್ಮಲ್ಲಿ ನೆಲೆಗೊಂಡಿರುವೆ" ಯೊವಾನ್ನ ( **15:4** )

ಎಫೆಸ್ಸಿ **3:14–21** ಪ್ರಭುಕ್ರಿಸ್ತ ನಮ್ಮ ಹೃದಯಲ್ಲಿ ನೆಲಸಲಿ.

ಲೂಕ **2:41–52** ಮನದಲ್ಲಿ ಎಲ್ಲವನ್ನು ಮೇರಿ ಧ್ಯಾನಿಸುತ್ತಿದ್ದರು.

ಧ್ಯಾನ

ಪ್ರಾರ್ಥನೆ

ಪವಿತ್ರಾತ್ಮರೇ, ನಮ್ಮ ಹೃದಯದಲ್ಲಿ ಪ್ರಭುಯೇಸುವಿನ ಪ್ರಸನ್ನತೆ ಪಡೆಯುವಂತಾಗಲಿ ಹಾಗೂ ಇದರಿಂದ ನಮ್ಮ ವಿಶ್ವಾಸ ವೃದ್ಧಿಸಲಿ. ನಮ್ಮ ಕಾರ್ಯಗಳು ಪ್ರಭುದ್ಧತೆ ಎಡೆಗೆ ಹೋಗಲಿ. ನಮ್ಮ ಪ್ರಾರ್ಥನೆಯನ್ನು ಆಲಿಸಿ ನಮ್ಮಲ್ಲಿ ಸದಾ ನೀವು ನೆಲೆಸಿರಿ.

## ಮೂರನೆ ದಿನ

ಒಂದೇ ಶರೀರವಾಗಿ ಬಾಳುವಂತೆ

"ನಾನು ನಿಮ್ಮನ್ನು ಪ್ರೀತಿಸಿದಂತೆ ಒಬ್ಬರನೊಬ್ಬರು ಪ್ರೀತಿಸಿರಿ"

ಯೊವಾನ್ನ ( 15:2 )

ಕೊಲೆಸ್ಸಿ 3:12–17 ದೇವರ ದಯೆಯನ್ನು ಧರಿಸಿಕೊಳ್ಳಿರಿ

ಯೊವಾನ್ನ 13:1–15, 34–35 ಒಬ್ಬರನೊಬ್ಬರು ಪ್ರೀತಿಸಿರಿ

<u>ಪ್ರಾರ್ಥನೆ</u>

ತಂದೆಯಾದ ದೇವರೇ, ನಮ್ಮ ಸಹೋದರ, ಸಹೋದರಿಯರಲ್ಲಿ ಹಾಗೂ ಕ್ರಿಸ್ತರ ಪ್ರೀತಿಯಮೂಲಕ ನಿಮ್ಮನ್ನೇ ನೀವು ಪ್ರಕಟಪಡಿಸಿದ್ದೀರಿ. ನಮ್ಮ ಹೃದಯಗಳನ್ನು ತೆರೆಯಿರಿ. ಇದರಿಂದ ನಾವು ಪರಸ್ಪರ ಸ್ವಾಗತಿಸುವ ಮನೋಭಾವನೆಯನ್ನು ಪಡೆಯುವಂತಾಗಲಿ .ನಮ್ಮಲ್ಲಿರುವ ಭೇದಭಾವ ದೂರಾಗಲಿ ನಾವು ಸದಾ ಒಂದೇ ಶರೀರಕ್ಕೆ ಸೇರಿದವರಾಗಿರುವಂತೆಮಾಡಿರಿ.

ನಾಲ್ಕನೆ ದಿನ

ಒಂದಾಗಿ ಪ್ರಾರ್ಥಿಸುವಂತೆ

"ನಾನು ನಿಮ್ಮನ್ನು ದಾಸರೆಂದು ಕರೆಯುವುದಿಲ್ಲ ನಿಮ್ಮನ್ನು ಗೆಳೆಯರೆಂದುಕರೆದಿದ್ದೇನೆ"

ಯೊವಾನ್ನ ( 15:5 )

ರೋಮ 8:26-27 ನಮ್ಮ ದೌರ್ಬಲ್ಯಗಳಲ್ಲಿ ಆತ್ಮರು ಸಹಾಯ ಮಾಡುತ್ತಾರೆ.

ಲೂಕ 4:1–4 ಪ್ರಭು ನಮಗೆ ಪ್ರಾರ್ಥಿಸಲು ಕಲಿಸಿರಿ

<u>ಪ್ರಾರ್ಥನೆ</u>

ಪ್ರಭುಯೇಸುವೇ, ನಿಮ್ಮ ಇಡೀ ಜೀವನವು ಪ್ರಾರ್ಥನೆಯಾಗಿತ್ತು ನಿಮ್ಮ ಜೀವನ ತಂದೆ ದೇವರೊಂದಿಗೆ ಐಕ್ಯವಾಗಿತ್ತು. ನಿಮ್ಮ ಆತ್ಮರು ನಮಗೆ ಪ್ರಾರ್ಥನೆ ಹೇಳುವಂತೆ ಸಶಕ್ತಗೊಳಿಸಲು ಇದರಿಂದ ನಾವು ಸದಾ ನಿಮ್ಮಲ್ಲಿ ಒಂದಾಗಿ ಪ್ರಾರ್ಥಿಸುವಂತೆ ಮಾಡಿರಿ.

ಐದನೆಯ ದಿನ

ದೇವರ ವಾಕ್ಯದಿಂದ ಪರಿವರ್ತನೆಗೊಳ್ಳಲು

"ನೀವಾದರೋ ನಾನು ನಿಮ್ಮೊಡನೆ ಆಡಿದ ಮಾತಿನಿಂದಾಗಿ ಸವರಿದ ಕವಲುಗಳಂತೆ ಶುದ್ಧರಾಗುವಿರಿ" ಯೊವಾನ್ನ ( 15:3 )

ಧರ್ಮೋ 30:1-20 ದೇವರ ವಾಕ್ಯ ನಮಗೆಪ್ರಿಯವಾದದ್ದು

ಮತ್ತಾಯ 5:1-12ಭಾಗ್ಯವಂತರು ನೀವು

ಪ್ರಾರ್ಥನೆ

ತಂದೆಯಾದ ದೇವರೇ ಅತೀ ಪೂಜ್ಯರು ನೀವು ನಿಮ್ಮ ವಾಕ್ಯವನ್ನು ನಮಗೆ ನೀಡಿ ನಮ್ಮನ್ನು ಪೋಷಿಸುತ್ತೀರಿ.ನಮ್ಮನ್ನು ನಿಮ್ಮ ರಕ್ತದಿಂದ ಶುದ್ಧ ಮಾಡಿ ಪರಿವರ್ತನೆಗೊಳಿಸಿರಿ.ನಮ್ಮ ಜೀವನವನ್ನು ರೂಪಿಸಿಕೊಳ್ಳಲು ನಮಗೆ ನಿಮ್ಮ ವಾಕ್ಯ ಪ್ರೇರಣೆಯಾಗಲಿ

ಆರನೆಯ ದಿನ

ಇತರರನ್ನು ಸ್ವಾಗತಿಸಲು

"ನೀವು ಸಫಲರಾಗಬೇಕು" ಯೊವಾನ್ನ ( 15:16 )

ಆದಿ 18:1-5ಅಬ್ರಹಾಮ ದೂತರನ್ನು ಉಪಚರಿಸುತ್ತಾನೆ

ಮಾರ್ಕ 6:30-44ಜನರನ್ನು ಕಂಡು ಪ್ರಭು ಮರಗುತ್ತಾನೆ

ಪ್ರಾರ್ಥನೆ

ಪ್ರಭುಯೇಸುವೇ, ನಮ್ಮೊಂದಿಗಿರುವ ಸಹೋದರ. ಸಹೋದರಿಯರನ್ನು ನಾವು ಸ್ವಾಗತಿಸುವಂತೆ ಮಾಡಿರಿ. ಅದರಲ್ಲಿಯೂ ಬಡವರನ್ನು ,ದಲಿತರನ್ನು ಹಾಗೂ ಬಹಿಷ್ಕೃತರನ್ನು ಸ್ವಾಗತಿಸಿ ನಿಮ್ಮನ್ನು ಅವರಲ್ಲಿ ಕಂಡು ಅವರನ್ನು ಉಪಚರಿಸುವಂತೆ ಮಾಡಿರಿ.

## ಏಳನೆಯ ದಿನ

## ಒಗ್ಗಟ್ಟಿನಲ್ಲಿ ಬೆಳೆಯಲು

"ನಾನೇ ದ್ರಾಕ್ಷ ಬಳ್ಳಿ ನೀವೆ ಅದರ ಕವಲು ಬಳ್ಳಿಗಳು" ಯೊವಾನ್ನ ( 15:4 )

**1 ಕೊರಿಂಥ 1:10–13; 3:21–23** ಕ್ರಿಸ್ತರು ವಿಭಾಗವಾಗಿದ್ದಾರೆಯೆ?

**ಯೊವಾನ್ನ 17:20–25** ನೀವು ನನ್ನಲ್ಲಿ ಒಂದಾಗಿರುವಂತೆ

**ಪ್ರಾರ್ಥನೆ**

ಪವಿತ್ರಾತ್ಮರೇ, ನಿಮ್ಮ ಪ್ರೇಮಾಗ್ನಿಯನ್ನು ನಮ್ಮಲ್ಲಿ ಪ್ರಜ್ವಲಿಸುವಂತೆ ಮಾಡಿ. ಇದರಿಂದ ನಾವು ಸದಾ ಐಕ್ಯತೆಯಲ್ಲಿ ಒಂದಾಗುವಂತೆ ಕರುಣಿಸಿರಿ..

## ಎಂಟನೆಯ ದಿನ

## "ಸಮಸ್ತ ಸೃಷ್ಟಿಯೊಂದಿಗೆ ಸಂಧಾನ ಪಡಿಸಲು "

"ನನ್ನಲ್ಲಿರುವ ಆನಂದ ನಿಮ್ಮಲ್ಲಿ ಇರಬೇಕೆಂತಲು" ಯೊವಾನ್ನ ( 15:11 )

**ಕೊಲೆಸ್ಸಿ 11:15–20** ಅವರಲ್ಲಿ ಸಮಸ್ತವು ಒಂದಾಗುತ್ತದೆ

**ಮಾರ್ಕ 4:30–32** ಸಣ್ಣ ಸಾಸಿವೆ ಕಾಳಿನಂತೆ

**ಪ್ರಾರ್ಥನೆ**

ಸರ್ವಶಕ್ತ ದೇವರೇ, ನೀವು ನಮ್ಮನ್ನು ಸೃಷ್ಟಿಸಿದ್ದೀರಿ. ಇದೇ ಸೃಷ್ಟಿ ಸಂಕುಲದ ಕಿರೀಟವನ್ನಾಗಿ ಮಾಡಿದ್ದೀರಿ. ನಿಮ್ಮ ಮಹಿಮೆಯನ್ನು ಸೃಷ್ಟಿಯಲ್ಲಿ ಪ್ರಕಟಪಡಿಸಿರುವಿರಿ. ಅದರಿಂದ ನಾವು ಸೃಷ್ಟಿಯೊಂದಿಗೆ ಸಂಧಾನ ಮಾಡಿಕೊಂಡು ಸದಾ ನಿಮ್ಮನ್ನು ಸ್ತುತಿಸುವಂತೆ ಮಾಡಿರಿ.

## ಕ್ರೈಸ್ತ ಐಕ್ಯತೆಯ ಭಾನುವಾರ21

ಇಂದು ನಾವು ಕ್ರೈಸ್ತ ಐಕ್ಯತೆಯ ಭಾನುವಾರವನ್ನು ಆಚರಿಸುತ್ತಿದ್ದೇವ. ಈ ವರ್ಷದ ಕ್ರೈಸ್ತ ಐಕ್ಯತೆಯ ವಿಷಯ " ನನ್ನ ಪ್ರೀತಿಯಲ್ಲಿ ನೆಲೆಗೊಳ್ಳಿರಿ ಹಾಗೂ ನೀವು ಸಮೃದ್ಧಿಯಾಗಿ ಫಲಕೊಡಿರಿ" ಯೊವಾನ್ನ ( 15:5-9)

ತಾಯಿ ಧರ್ಮಸಭೆಯು ಎಲ್ಲ ಕ್ರೈಸ್ತ ಪಂಗಡದವರೊಂದಿಗೆ ಐಕ್ಯತೆಯಿಂದ ಇರಲು ಬಯಸುತ್ತದೆ.ಆದ್ದರಿಂದ ವರ್ಷಕ್ಕೆ ಒಂದು ವಾರ ಇದಕ್ಕೆಂದು ಮೀಸಲಿಟ್ಟಿದೆ. ಈ ವಾರ ನಾವು ಪ್ರಭು ಯೇಸು " ಇವರೆಲ್ಲಾಒಂದಾಗಲಿ" ಎಂದು ಪ್ರಾರ್ಥಿಸಿದಂತೆ ನಾವು ಪ್ರಾರ್ಥಿಸ ಬೇಕಾಗಿದೆ.ಪ್ರಭುಯೇಸು ದ್ರಾಕ್ಷಾ ಬಳ್ಳಿ ನಾವು ಅದರ ಕವಲು ಬಳ್ಳಿಗಳು . ಅವರು ಹೇಗೆ ತಂದೆ ದೇವರಲ್ಲಿ ಒಂದಾಗಿದ್ದಾರೋ ನಾವು ಅದೇ ರೀತಿ ಒಂದಾಗಬೇಕಾಗಿದೆ. ಈ ದಿವ್ಯ ಬಲಿಪೂಜೆಯಲ್ಲಿ ಕ್ರೈಸ್ತರಾದ ನಾವು ನಮ್ಮ ಭಿನ್ನತೆಗಳನ್ನು ಮರೆತು ಒಂದಾಗಿ ಪ್ರಭುವಿನ ಸಾಕ್ಷಿ ನೀಡುವಂತಾಗಲೆಂದು ಪ್ರಾರ್ಥಿಸೋಣ.

### ಮೊದಲನೆ ವಾಚನ

ನಿನೆವೆ ನಗರದ ಜನರು ಯೋನನ ಮೂಲಕ ದೇವರು ಕೊಟ್ಟ ಆದೇಶಕ್ಕೆ ಸ್ಪಂದಿಸಿದ ರೀತಿ ಅನುಕರಣೀಯ ಮನಪರಿವರ್ತನೆಅವರ ರಕ್ಷಣೆಗೆ ದಾರಿ ಮಾಡಿಕೊಡುತ್ತದೆ ಎನ್ನುವುದನ್ನು ಇಲ್ಲಿ ನಾವು ಕಾಣಬಹುದು.

### ಎರಡನೆ ವಾಚನ

ನಮ್ಮ ಪ್ರಸ್ತುತ ಸ್ಥಿತಿ ಗತಿಗಳು ಏನೇ ಇರಲಿ ಎಲ್ಲವನ್ನು ಬಿಟ್ಟು ಪ್ರಭುವನ್ನು ಮೆಚ್ಚಿಸುವಲ್ಲಿ ನಮ್ಮೆಲ್ಲಾ ಶ್ರಮ, ಬದ್ಧತೆ ಇರಬೇಕು ಎನ್ನುವನಿಷ್ಠುರವಾದ ಮಾತುಗಳು ಇಲ್ಲಿವೆ.

# ವಿಶ್ವಾಸಿಗಳ ಪ್ರಾರ್ಥನೆ

1.ಧರ್ಮಸಭೆಯನ್ನು ಮುನ್ನಡೆಸಲು ದೈವ ಕರೆಯನ್ನು ಪಡೆದಿರುವ ವಿಶ್ವಗುರು ಫ್ರಾನ್ಸಿಸ್ ,ಧರ್ಮಾಧ್ಯಕ್ಷರುಗಳು , ಯಾಜಕರು  ಹಾಗೂ ಎಲ್ಲಾ ಧಾರ್ಮಿಕ ಸಹೋದರ ಸಹೋದರಿಯರು ಕ್ರೈಸ್ತಐಕ್ಯಮತ್ಯೆದ  ಧ್ಯೇಯವನ್ನು  ಅರಿತು ಎಲ್ಲರನ್ನು ಒಗ್ಗೂಡಿಸುವ ಸಾಧನವಾಗಲೆಂದು ಪ್ರಾರ್ಥಿಸೋಣ

2. ಪಶ್ಚಾತ್ತಾಪ ಪಟ್ಟು ರಕ್ಷಣೆ ಪಡೆದ ನಿನೆವೆ ಊರಿನ ಜನರಂತೆ, ನಮ್ಮ ಮನಗಳ ,ಕಿವಿಗಳು ದೇವರ ಸಂದೇಶಕ್ಕೆ ಸದಾ ಜಾಗೃತವಾಗಿದ್ದು ನಮ್ಮಲ್ಲಿರುವ ಭಿನ್ನತೆಯನ್ನು ಮರೆತು ಒಂದಾಗುವಂತೆ ಪ್ರಾರ್ಥಿಸೋಣ

3.ನಮ್ಮಭಿನ್ನತೆಗಳು ಏನೇ ಇರಲಿ ಅವೆಲ್ಲವುಗಳನ್ನು ಮರೆತು ಪ್ರಭುವಿನ ಮಾತಿಗೆ ಸಮ್ಮತಿಯನ್ನು ಸೂಚಿಸಿ ಎಲ್ಲ ಕ್ರೈಸ್ತ ಪಂಗಡದವರ ಜೊತೆ ಸ್ನೇಹ ಬೆಳೆಸುವಂತೆ ಪ್ರಾರ್ಥಿಸೋಣ

4.ನಮ್ಮದು ಒಂದೇ ದೀಕ್ಷಾಸ್ನಾನ ,ಒಬ್ಬರೇ ದೇವರು ಎಂದು ತಿಳಿದು ನಮ್ಮಲ್ಲಿರುವ ದ್ವೇಷವನ್ನು ದೂರಮಾಡಿ ಸದಾ ಸಾಮರಸ್ಯದಿಂದ ಪ್ರಭುವಿನ ಶುಭಸಂದೇಶ ಸಾರುವ ಸಾಧನವಾಗುವಂತೆ ಪ್ರಾರ್ಥಿಸೋಣ